ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ದಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಸೇವಾ ಶುಲ್ಕ:ಪರಿಷ್ಕರಣೆ:2024 ದಿನಾಂಕ 01-04-2024

## ಕಛೇರಿ ಆದೇಶ

ವಿಷಯ: ನಿಗಮದಿಂದ ಹಂಚಿಕೆ ಮಾಡಲ್ಪಟ್ಟಿರುವ ಮಳಿಗೆ/ಗೋದಾಮು/ಫ್ಲ್ಯಾಟ್ಸ್ ಹಾಗೂ ನಿವೇಶನಗಳಿಗೆ ವಿಧಿಸಲಾಗಿರುವ ಸೇವಾ ಶುಲ್ಕ ದರವನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ ಸಮನ್ವಯ:ಸೇವಾ ಶುಲ್ಕ:ಪರಿಷ್ಕರಣೆ:2022 ದಿನಾಂಕ 29.03.2022

-------

ವಿಷಯಕ್ಕೆ ಸಂಬಂಧಪಟ್ಟಂತೆ, 2024-25ನೇ ಸಾಲಿಗೆ ಸೇವಾ ಶುಲ್ಕದ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ. ಕಾರಣ ಈಗ ಚಾಲ್ತಿಯಲ್ಲಿರುವ ಸೇವಾ ಶುಲ್ಕಕ್ಕೆ **ಶೇ.10ರಷ್ಟು** ಹೆಚ್ಚಳ ಮಾಡಿ ಪರಿಷ್ಕರಿಸಿ ದಿನಾಂಕ 01.04.2024 ರಿಂದ 31.03.2025ರವರೆಗೆ ಅನ್ವಯವಾಗುವಂತೆ **'ಸೇವಾ ಶುಲ್ಕ'** ದರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿರುತ್ತದೆ.

### I. ಮಳಿಗೆಗಳಿಗೆ : (ಪ್ರತಿ ವರ್ಷಕ್ಕೆ. ರೂ.ಗಳಲ್ಲಿ)

| ಕ್ರಮ. ಸಂಖ್ಯೆ | ಮಳಿಗೆ ಮಾದರಿ | ಚಾಲ್ತಿಯಲ್ಲಿರುವ ಸೇವಾ ಶುಲ್ಕ ದರ. | **01.04.2024ರಿಂದ 31.03.2025ರವರೆಗಿನ ಸೇವಾ ಶುಲ್ಕದ ಪರಿಷ್ಕೃತ ದರ** |
|---|---|---|---|
| 1. | ಎ | 14597.00 | **16057.00** |
| 2. | ಬಿ | 10523.00 | **11575.00** |
| 3. | ಸಿ | 7018.00 | **7720.00** |
| 4. | ಡಿ | 4678.00 | **5146.00** |
| 5. | ಮಿನಿ/ ಸೂ.ಮಿನಿ | 2340.00 | **2574.00** |

### II. ನಿವೇಶನಗಳಿಗೆ : (ಪ್ರತಿ ವರ್ಷಕ್ಕೆ. ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಸ್ಥಳ | ಚಾಲ್ತಿಯಲ್ಲಿರುವ ಸೇವಾ ಶುಲ್ಕ ದರ. | **01.04.2024ರಿಂದ 31.03.2025ರವರೆಗಿನ ಸೇವಾ ಶುಲ್ಕದ ಪರಿಷ್ಕೃತ ದರ** |
|---|---|---|---|
| 1. | 100 ಚ.ಮೀ. ವರೆಗೆ | 2926.00 | **3219.00** |
| 2. | 101 ಚ.ಮೀ. ನಿಂದ 300 ಚ.ಮೀ. ವರೆಗೆ | 5849.00 | **6434.00** |
| 3. | 301 ಚ.ಮೀ. ನಿಂದ 500 ಚ.ಮೀ. ವರೆಗೆ | 8773.00 | **9650.00** |
| 4. | 501 ಚ.ಮೀ. ನಿಂದ 700 ಚ.ಮೀ. ವರೆಗೆ | 11691.00 | **12860.00** |
| 5. | 701 ಚ.ಮೀ. ನಿಂದ 1000 ಚ.ಮೀ. ವರೆಗೆ | 14597.00 | **16057.00** |
| 6. | 1001 ಚ.ಮೀ. ನಿಂದ 2000 ಚ.ಮೀ.ವರೆಗೆ | 17541.00 | **19295.00** |
| 7. | 2001 ಚ.ಮೀ.ಮೇಲ್ಪಟ್ಟು | 20427.00 | **22470.00** |

..2..

III. ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಪ್ರತಿ ವರ್ಷಕ್ಕೆ ಸೇವಾ ಶುಲ್ಕವನ್ನು ಪ್ರತಿ ಚ.ಮೀ.ಗೆ **ರೂ.91.00ರಂತೆ** ನಿಗದಿಪಡಿಸಲಾಗಿದೆ.

IV. ಮೇಲಿನ ಸೇವಾ ಶುಲ್ಕ ದರಗಳು ದಿನಾಂಕ **01.04.2024** ರಿಂದ ಜಾರಿಗೆ ಬರುತ್ತವೆ ಹಾಗೂ ದಿನಾಂಕ **31.03.20235**ರವರೆಗೆ ಅಥವಾ ಪರಿಷ್ಕರಣೆ ಆಗುವವರೆಗೆ ಚಾಲ್ತಿಯಲ್ಲಿರುತ್ತವೆ.

V. ಮಳಿಗೆ ಅಥವಾ ನಿವೇಶನ ಹಂಚಿಕೆಯು ವರ್ಷದ ಮಧ್ಯ ಭಾಗದಲ್ಲಿ ಆಗಿದ್ದಲ್ಲಿ, ಅಲ್ಲಿಂದ ಸದರಿ ಸಾಲಿನ ಅಂತ್ಯದವರೆವಿಗೂ ಅಂದರೆ ಮಾರ್ಚ್ 31ರ ವರೆಗೆ ಪ್ರೋರೇಟ (Prorata) ಆಧಾರದ ಮೇಲೆ ಲೆಕ್ಕಾಚಾರ ಮಾಡಿ, ಅದರಂತೆ ವಸೂಲಿ ಮಾಡಿ ನಂತರ ಮುಂದಿನ ವರ್ಷಗಳಲ್ಲಿ ಪೂರ್ತಿ ಹಣ ವಸೂಲು ಮಾಡತಕ್ಕದ್ದು.

VI. ಎಲ್ಲಾ ಕೈಗಾರಿಕಾ ಘಟಕಗಳಿಗೆ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಪೂರ್ತಿ ವರ್ಷಕ್ಕೆ ಸೇವಾ ಶುಲ್ಕ ಬೇಡಿಕೆ ಬಿಲ್ಲನ್ನು ಸಿದ್ದಪಡಿಸಿ ಅದೇ ತಿಂಗಳಿನಲ್ಲಿ ತಪ್ಪದೇ ವಸೂಲಿ ಮಾಡತಕ್ಕದ್ದು. ಇದರಿಂದ ಆ ವರ್ಷದಲ್ಲಿ ಕೈಗೊಳ್ಳುವ ದುರಸ್ತಿ ಇನ್ನಿತರೆ ಕೆಲಸಗಳನ್ನು ಯೋಜನೆಯಂತೆ ಪೂರೈಸಲು ಸಾಧ್ಯವಾಗುವುದು.

VII. ನಿಗಮದ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಳಿಗೆ/ನಿವೇಶನಗಳ ಹಂಚಿಕೆದಾರರುಗಳಿಗೆ ಡಿಮ್ಯಾಂಡ್ ಬಿಲ್ಲಿನೊಂದಿಗೆ ಸೇವಾ ಶುಲ್ಕ ಪರಿಷ್ಕೃತ ದರವು ದಿನಾಂಕ 01.04.2024 ರಿಂದ ಕಡ್ಡಾಯವಾಗಿ ಜಾರಿಗೆ ಬರುವ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಿಗೆ ಜರೂರಾಗಿ ತಿಳಿಸಿ, ಅದರಂತೆ ಪರಿಷ್ಕೃತ ಸೇವಾ ಶುಲ್ಕವನ್ನು ವಸೂಲಿ ಮಾಡತಕ್ಕದ್ದು.

ನಿಗಮದ ಎಲ್ಲಾ ಇಲಾಖಾ / ವಿಭಾಗ / ಶಾಖಾ ವ್ಯವಸ್ಥಾಪಕರುಗಳು ಸದರಿ ಆದೇಶಗಳಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

**ವ್ಯವಸ್ಥಾಪಕ ನಿರ್ದೇಶಕರು**

**ಅವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ & ಭೂಸ್ವಾಧೀನ),/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ) / (ವಾಣಿಜ್ಯ) /(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ಕಛೇರಿ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.